# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಮುಕ್ತಗಂಗೋತ್ರಿ, ಮೈಸೂರು – 570 006**

**ಅಧ್ಯಯನ ಸಾಮಗ್ರಿ ವಿಭಾಗ**


ಸಂಖ್ಯೆ: ಕರಾಮುವಿ/ಅಸಾವಿ/11-61/2025-26 ದಿನಾಂಕ: 03-02-2026

## ಅಧಿಸೂಚನೆ

ವಿಷಯ: ಕರಾಮುವಿ ನಿಲಯದಲ್ಲಿ ಪ್ರವೇಶಾತಿ ಪಡೆದ ಹಾಗೂ ಪಡೆಯದೇ ಇರುವ ವಿದ್ಯಾರ್ಥಿಗಳಿಗೆ / ಕಲಿಕಾರ್ಥಿಗಳಿಗೆ ಅಧ್ಯಯನ ಸಾಮಗ್ರಿಗಳನ್ನು ವಿತರಿಸಲು ಶುಲ್ಕ ನಿಗಧಿಪಡಿಸಿರುವ ಬಗೆಗೆ.

ಉಲ್ಲೇಖ:
1. 62ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯ ತೀರ್ಮಾನ.
2. 63ನೇ ವಿಶೇಷ ವ್ಯವಸ್ಥಾಪನಾ ಮಂಡಳಿ ಸಭೆಯ ತೀರ್ಮಾನ.
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 29-01-2026.

******

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಮುದ್ರಿಸಲಾದ ವಿವಿಧ ಶಿಕ್ಷಣಕ್ರಮಗಳ ಅಧ್ಯಯನ ಸಾಮಗ್ರಿಗಳನ್ನು ಹೆಚ್ಚುವರಿಯಾಗಿ ವಿತರಿಸುವ ಈ ಕೆಳಕಂಡ ಸಂದರ್ಭಗಳಲ್ಲಿ ಅಧ್ಯಯನ ಸಾಮಗ್ರಿಗಳಿಗೆ ಶುಲ್ಕ ನಿಗಧಿಪಡಿಸಲಾಗಿದೆ.

1. ಕರಾಮುವಿ ನಿಲಯದ ವಿದ್ಯಾರ್ಥಿಯು ಪ್ರವೇಶಾತಿ ಪಡೆದಿರುವ ಶಿಕ್ಷಣಕ್ರಮಕ್ಕೆ ಸಂಬಂಧಿಸಿದಂತೆ ಅಧ್ಯಯನ ಸಾಮಗ್ರಿಗಳನ್ನು ಕಳೆದು ಕೊಂಡಂತಹ ಸಂದರ್ಭಗಳಲ್ಲಿ ಮತ್ತೊಂದು ಪ್ರತಿಗೆ (ಎರಡನೇ ಪ್ರತಿ) ಪ್ರತಿ ಬ್ಲಾಕ್ ಗೆ ರೂ. 100.00 ರಂತೆ (ನೂರು ಮಾತ್ರ) ನಿಗಧಿಪಡಿಸಿದೆ.
2. ವಿದ್ಯಾರ್ಥಿಯು ಕರಾಮುವಿಯಲ್ಲಿ ವ್ಯಾಸಂಗ ಮಾಡುತ್ತಿದ್ದು, ಸದರಿಯವರು ಪ್ರವೇಶಾತಿ ಪಡೆದ ಕೋರ್ಸ್ ಅಲ್ಲದೇ ಬೇರೆ ಕೋರ್ಸ್‌ಗಳ ಅಧ್ಯಯನ ಸಾಮಗ್ರಿಗಳನ್ನು ಪಡೆಯಲು ಇಚ್ಚಿಸಿದಲ್ಲಿ, ಅಂತಹ ವಿದ್ಯಾರ್ಥಿಗಳಿಗೆ ಪ್ರತಿ ಬ್ಲಾಕ್‌ಗೆ ರೂ.200 ರಂತೆ (ಇನ್ನೂರು ಮಾತ್ರ) ನಿಗಧಿಪಡಿಸಿದೆ.
3. ಬಾಹ್ಯ ವಿದ್ಯಾರ್ಥಿಗಳು / ಹೊರಗಿನ ಕಲಿಕಾರ್ಥಿಗಳು ಅಧ್ಯಯನ ಸಾಮಗ್ರಿಗಳನ್ನು ಪಡೆಯಲು ಇಚ್ಚಿಸಿದಲ್ಲಿ, ಪ್ರತಿ ಬ್ಲಾಕ್‌ಗೆ ರೂ.200 ರಂತೆ (ಇನ್ನೂರು ಮಾತ್ರ) ನಿಗಧಿಪಡಿಸಿದೆ.

ಈ ಮೇಲಿನ ಸಂದರ್ಭಗಳಲ್ಲಿ ಕೋರಿಕೆಯನ್ನು ಸಲ್ಲಿಸಿದಂತ ವಿದ್ಯಾರ್ಥಿಗಳಿಗೆ ಮೇಲೆ ನಿಗಧಿಪಡಿಸಿರುವ ಶುಲ್ಕವನ್ನು ಆನ್‌ಲೈನ್ ಮೂಲಕ ಪಾವತಿಸಿಕೊಂಡು ಅಧ್ಯಯನ ಸಾಮಗ್ರಿಗಳನ್ನು ವಿತರಿಸಲು ಕ್ರಮವಹಿಸತಕ್ಕದ್ದು.

ಕುಲಸಚಿವರು

**ಸೂಚನೆ:**

ಮೇಲಿನಂತೆ ವಿದ್ಯಾರ್ಥಿಗಳು ಸ್ನಾತಕೋತ್ತರ ಪದವಿಯ ಪುಸ್ತಕಗಳನ್ನು ಖರೀದಿಸುವಾಗ ಸಂಬಂದ ಪಟ್ಟ ವಿಷಯದ ಎಲ್ಲಾ ಪುಸ್ತಕಗಳನ್ನು ಖರೀದಿಸಬೇಕು, ಪ್ರತ್ಯೇಕವಾಗಿ ಆಯ್ದ ಪುಸ್ತಕಗಳನ್ನಷ್ಟೆ ಖರೀದಿಸಲು ಅವಕಾಶವಿರುವುದಿಲ್ಲ.

**ಪ್ರತಿ:**

1. ವಿಶೇಷಾಧಿಕಾರಿಗಳು, ಮಾನ್ಯ ಕುಲಪತಿಯವರ ಆಪ್ತ ಶಾಖೆ, ಕರಾಮುವಿ, ಮೈಸೂರು.
2. ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
3. ಡೀನ್ (ಶೈಕ್ಷಣಿಕ) ಕರಾಮುವಿ, ಮೈಸೂರು.
4. ಹಣಕಾಸು ಅಧಿಕಾರಿಗಳು, ಕರಾಮುವಿ, ಮೈಸೂರು.
5. ಕುಲಸಚಿವರು (ಪರೀಕ್ಷಾಂಗ) ಕರಾಮುವಿ, ಮೈಸೂರು.
6. ಡೀನ್ (ಅಧ್ಯಯನ ಕೇಂದ್ರ) ಕರಾಮುವಿ, ಮೈಸೂರು.
7. ನಿರ್ದೇಶಕರು ಪ್ರವೇಶಾತಿ ವಿಭಾಗ, ಕರಾಮುವಿ, ಮೈಸೂರು.
8. ನಿರ್ದೇಶಕರು I.T ವಿಭಾಗ, ಕರಾಮುವಿ, ಮೈಸೂರು – ತಂತ್ರಾಂಶದಲ್ಲಿ ನಿಗದಿತ ಶುಲ್ಕವನ್ನು ನವೀಕರಿಸಲು ಕ್ರಮವಹಿಸುವುದು.
9. ಡಾ.ನವೀನ್ ಕುಮಾರ್ ಸಿ.ಜಿ., ನೋಡಲ್ ಆಫೀಸರ್, ವೆಬ್‌ಸೈಟ್ ನಿರ್ವಹಣೆ, ಕರಾಮುವಿ, ಮೈಸೂರು.
10. ವಿಭಾಗ ಮುಖ್ಯಸ್ಥರು, ಎಲ್ಲಾ ಅಧ್ಯಯನ / ಸಂಶೋಧನ ವಿಭಾಗಗಳು, ಕರಾಮುವಿ, ಮೈಸೂರು.
11. ಎಲ್ಲಾ ಉಪಕುಲಸಚಿವರು, ಸಹಾಯಕ ಕುಲಸಚಿವರು ಹಾಗೂ ಅಧೀಕ್ಷಕರುಗಳು, ಕರಾಮುವಿ, ಮೈಸೂರು – ತಮ್ಮ ವಿಭಾಗದ ಇತರೆ ಸಿಬ್ಬಂದಿಗಳ ಗಮನಕ್ಕೆ ತರುವುದು.
12. ಕಚೇರಿ ಪ್ರತಿ.